ಪಶುವೈದ್ಯಕೀಯ ಡಾಕ್ಟರುಗಳು ಇಲ್ಲದೆ ತುಂಬಾ ತೊಂದರೆಯಾಗಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ತಮ್ಮ ಮೂಲಕ ಅಪೇಕ್ಷೆ ಪಡುತ್ತಿದ್ದೇನೆ.

ಶ್ರೀ ಎ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಕಂಟಿನ್ಯೂಯಸ್ ಪ್ರೋಸಸ್ ಎಂದು ಏಕೆ ಹೇಳಿದ್ದೇನೆಂದರೆ, ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೆ ಡಾಕ್ಟರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಿ ಎಂದು ಡೆಪ್ಯುಟಿ ಕಮಿಷನರ್‌ಗಳಿಗೆ ಸರ್ಕಾರ ಆದೇಶ ಕೊಟ್ಟಿದೆ. ಫಸ್ಟ್ ರೌಂಡ್ ಇಂಟರ್‌ವ್ಯೂ ಮಾಡಿದಾಗ ಕೆಲಪರು 2-3 ಜಿಲ್ಲೆಗಳಲ್ಲಿ ಅರ್ಜಿಗಳನ್ನು ಹಾಕಿಕೊಂಡು ಸೆಲೆಕ್ಟ್ ಆದವರು ಕೆಲವು ಜಿಲ್ಲೆಗಳಿಗೆ ಬಂದು ರಿಪೋರ್ಟ್ ಮಾಡಿಕೊಂಡಿಲ್ಲ. ಈಗ ಒಟ್ಟಾರೆ 1200 ವೆಕೆನ್ಸೀಸ್‌ನ್ನು ಭರ್ತಿ ಮಾಡಿದ್ದೇವೆ. ತಮ್ಮ ಪ್ರದೇಶದಲ್ಲಿನ ಆಸ್ಪತ್ರೆಗಳ ಲೆಕ್ಕವನ್ನು ಇಟ್ಟುಕೊಂಡು 3, ಡಾಕ್ಟರ್ಸ್‌ಗಳು ಸೀನಿಯರ್ ವೆಟರ್ನರಿ ಅಸಿಸ್ಟೆಂಟ್ಸ್ 2, ವೆಟರ್ನರಿ ಅಸಿಸ್ಟೆಂಟ್ಸ್ 3, ಗ್ರೂಪ್-ಡಿ ಹೀಗೆ ಒಟ್ಟು 11 ವೇಕೆನ್ಸಿಸ್‌ನ್ನು ಅಲ್ಲಿ ಭರ್ತಿ ಮಾಡಬೇಕಾಗಿದೆ. ಈಗ ಎರಡನೇ ಸುತ್ತು ಸೆಲೆಕ್ಷನ್ ಮಾಡುವುದಕ್ಕೆ ಡಿ.ಸಿಯವರಿಗೆ ಆದೇಶ ಹೋಗಿದೆ. ಅದನ್ನು ನಾವು ತುಂಬುತ್ತೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ ಅವರ ಭಾಗದಲ್ಲಿ ಆಸ್ಪತ್ರೆಗಳು ಇಲ್ಲದೆ ತೊಂದರೆಯಾಗಿದೆ ಎಂದು ಹೇಳಿದರು. ಅಪ್‌ಗ್ರೇಡೇಷನ್‌ನಲ್ಲಿ ಹೈಯೆಸ್ಟ್ ಉತ್ತರ ಕರ್ನಾಟಕ ಭಾಗಕ್ಕೆ ನಾವು ಕೊಡುತ್ತಿದ್ದೇವೆ. ಈ ವರ್ಷ ಕೂಡ 200 ಆಸ್ಪತ್ರೆಗಳನ್ನು ಅಪ್‌ಗ್ರೇಡೇಷನ್ ಆಗಿ ಮಾಡುವುದಕ್ಕೆ ಬಿಡುಗಡೆ ಮಾಡುತ್ತಿದ್ದೇವೆ. ಇನ್ನು 15 ದಿವಸದಲ್ಲಿ ಇದು ಆಗಬಹುದು. ಆ 200ರಲ್ಲಿ ಸಿಂಹಪಾಲು ನಿಮ್ಮ ಕಡೆಗೆ ಕೊಡುತ್ತೇವೆನ್ನುವ ಮಾತಾಗಿದೆ. ಇಂಬ್ಯಾಲೆನ್ಸ್ ಏನಿದೆ ಆ ಇಂಬ್ಯಾಲೆನ್ಸ್‌ನ್ನು ಸರಿ ಮಾಡಲಿಕ್ಕೆ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡುತ್ತಿದ್ದೇವೆ. ಇನ್ನು ಪಶುಗಳಿಗೆ ರೋಗಗಳು ಬರುತ್ತವೆ ಎನ್ನುವ ವಿಚಾರದಲ್ಲಿ ಹೇಳುವುದಾದರೆ, ಪ್ರತಿ ಜಿಲ್ಲೆಯಲ್ಲೂ ಈಗ ಹೊಸ ಲ್ಯಾಬ್‌ಗಳನ್ನು ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಬಹುಶಃ ಮಾರ್ಚ್ ಅಂತ್ಯದೊಳಗೆ 27 ಜಿಲ್ಲೆಗಳಿಗೂ ಕೂಡ 27 ಲ್ಯಾಬ್‌ಗಳನ್ನು ಕೊಡುತ್ತೇವೆ. ಅದರಲ್ಲಿ ಪ್ಯೆಯಾರಿಟಿ ನಾರ್ತ್ ಕರ್ನಾಟಕ ಜಿಲ್ಲೆಗಳಿಗೆ ಕೊಡುತ್ತೇವೆ. ಮಾನ್ಯ ಸದಸ್ಯರ ಕೊರಗು ನಮಗೆ ಅರ್ಥವಾಗಿದೆ. ಹೊಸ ಮಂಜೂರಾತಿಯನ್ನು ಕೊಡುವಂಥ ಸಂದರ್ಭದಲ್ಲಿ ನಿಮಗೆ ಹೆಚ್ಚು ಸಹಕಾರವನ್ನು ಸರ್ಕಾರ ತೋರಿಸುತ್ತದೆಂದು ಹೇಳುತ್ತೇನೆ ಮತ್ತು ತುಂಬಬೇಕಾಗಿರುವಂಥ ಖಾಲಿ ಹುದ್ದೆಗಳು ನಮ್ಮ ನಾರ್ಮ್ಸ್ ಪ್ರಕಾರ ಏನಿವೆ ಅವನ್ನು ಸೆಕೆಂಡ್ ರೌಂಡ್ ಸೆಲೆಕ್ಷನ್‌ನಲ್ಲಿ ತುಂಬಲಿಕ್ಕೆ ನಾನು ಡೈರೆಕ್ಷನ್ಸ್‌ನ್ನು ಕೊಡುತ್ತೇನೆ. ಹಾಗೆಯೇ ಉಗಾರ ಗ್ರಾಮದಲ್ಲಿ ಕಟ್ಟಡ ರೆಡಿಯಾಗಿದ್ದು ಅದನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡು ಸೇವೆ ಪ್ರಾರಂಭ ಮಾಡಲಿ ಎಂದು ಮಾನ್ಯ ಸದಸ್ಯರು ಈಗತಾನೆ ಸೂಚನೆ ಕೊಟ್ಟಿದ್ದಾರೆ. ಆ ಸೂಚನೆ ಪ್ರಕಾರ ನಾವು ಕ್ರಮ ತೆಗೆದುಕೊಂಡು ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡಲಿಕ್ಕೆ ನಾನು ಸರ್ಕಾರದ ಕಡೆಯಿಂದ ಭರವಸೆ ಕೊಡುತ್ತೇನೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿರುವ ಸಕ್ಕರೆ ದಾಸ್ತಾನು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 37(842)

ಸದಸ್ಯರ ಹೆಸರು : ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಖಾಸಗಿ ಮತ್ತು ಸರ್ಕಾರಿ ಸಕ್ಕರೆ ಕಾರ್ಖಾನೆಗಳೆಷ್ಟು; ಇವುಗಳು ವರ್ಷಕ್ಕೆ ಎಷ್ಟು ಸಕ್ಕರೆಯನ್ನು ಉತ್ಪಾದಿಸುತ್ತಿವೆ?

ಆ) ಸಕ್ಕರೆ ಕಾರ್ಖಾನೆಗಳಲ್ಲಿ ಒಟ್ಟು ಎಷ್ಟು ದಾಸ್ತಾನಿದೆ; ಅದರ ಅಂದಾಜು ಮೊತ್ತವೆಷ್ಟು?

ಇ) ಈ ವರ್ಷ ಸಕ್ಕರೆ ಕಾರ್ಖಾನೆಗಳು ರೈತರಿಂದ ಎಷ್ಟು ಕಬ್ಬನ್ನು ಪಡೆಯಲಾಗಿದೆ; ಎಷ್ಟು ಹಣವನ್ನು ರೈತರಿಗೆ ಬಿಡುಗಡೆ ಮಾಡಲಾಗಿದೆ; ಉಳಿದ ಬಾಕಿ ಹಣವೆಷ್ಟು?

ಈ) ರಾಜ್ಯದಲ್ಲಿ ಎಷ್ಟು ಸಕ್ಕರೆಯನ್ನು ಈ ವರ್ಷ ಬಿಡುಗಡೆ ಮಾಡಿದೆ ಉಳಿದ ಸಕ್ಕರೆ ಎಷ್ಟು?

ಉತ್ತರ

ಅ) ರಾಜ್ಯದಲ್ಲಿ ಪ್ರಸಕ್ತ 38 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿದ್ದು ಇವುಗಳಲ್ಲಿ 18 ಸಹಕಾರಿ ವಲಯದಲ್ಲಿ 17 ಖಾಸಗಿ ವಲಯದಲ್ಲಿ 2 ಸಾರ್ವಜನಿಕ ವಲಯದಲ್ಲಿ ಹಾಗೂ ಒಂದು ಜಂಟಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ವರ್ಷಕ್ಕೆ ಸುಮಾರು 15ರಿಂದ 16 ಲಕ್ಷ ಮೆ.ಟನ್ ಸಕ್ಕರೆಯನ್ನು ಉತ್ಪಾದಿಸುತ್ತಿವೆ.

ಆ) ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ದಿ:31-12-2001ರ ಅಂತ್ಯಕ್ಕೆ 10.62 ಲಕ್ಷ ಮೆ.ಟನ್ ಸಕ್ಕರೆ ದಾಸ್ತಾನಿರುತ್ತದೆ. ಇದರ ಮೌಲ್ಯವು ಅಂದಾಜು ರೂ.1380 ಕೋಟಿ ಆಗಬಹುದಾಗಿದೆ.

ಇ) 2001-02ನೇ ಸಾಲಿಗೆ ದಿ:31-12-2001ರ ವರೆಗೆ ಸಕ್ಕರೆ ಕಾರ್ಖಾನೆಗಳು 55.56 ಲಕ್ಷ ಮೆ.ಟನ್ ಕಬ್ಬನ್ನು ಖರೀದಿಸಿರುತ್ತವೆ. ಈ ಪೈಕಿ ರೈತರಿಗೆ ರೂ.280.91 ಕೋಟಿ ಹಣ ಪಾವತಿಸಿದ್ದು ರೂ.184.96 ಕೋಟಿ ಪಾವತಿಸಲು ಬಾಕಿ ಇರುತ್ತದೆ.

ಈ) 2001-2ನೇ ಸಾಲಿಗೆ ದಿ:31-12-2001ರ ವರೆಗೆ 4.84ಲಕ್ಷ ಮೆ.ಟನ್ ಸಕ್ಕರೆ ಬಿಡುಗಡೆಯಾಗಿರುತ್ತದೆ. ಹಾಗೂ 10.62ಲಕ್ಷ ಮೆ.ಟನ್ ಸಕ್ಕರೆ ದಾಸ್ತಾನು ಇರುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ರಾಜ್ಯದ 38 ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 10.62 ಲಕ್ಷ ಮೆ.ಟನ್ ಸಕ್ಕರೆ ದಾಸ್ತಾನು ಇದ್ದು ಇದರ ಅಂದಾಜು 1380 ಕೋಟಿ ರೂಪಾಯಿಗಳೆಂದು ಉತ್ತರದಲ್ಲಿ ಹೇಳಿದ್ದಾರೆ. ಇದನ್ನು ಬಿಡುಗಡೆ ಮಾಡುವ ಪ್ರಯತ್ನವಾಗಿ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು

ಕಳೆದ ಸದನದಲ್ಲಿ ಹೇಳಿದ್ದರು. ಏನು ತೀರ್ಮಾನವಾಯಿತೋ ಗೊತ್ತಿಲ್ಲ. ಸಕ್ಕರೆ ಬಿಡುಗಡೆ ಆಗಿಲ್ಲ. ಒಂದು ವರ್ಷದಿಂದ ಕಬ್ಬನ್ನು ಬೆಳೆದು ಅದರಿಂದ ಬರುವಂಥ ಹಣದಲ್ಲಿ ಜೀವನ ಮಾಡುವಂಥ ರೈತನು ಹಣದ ನಿರೀಕ್ಷೆ ಮಾಡಿ ಸಕ್ಕರೆ ಕಾರ್ಖಾನೆಗೆ ಹೋದರೆ ಅಲ್ಲಿಂದ ಅವನಿಗೆ ಹಣವೇ ಪಾವತಿ ಆಗಿಲ್ಲ. ಮಂಡ್ಯ ಸಕ್ಕರೆ ಕಾರ್ಖಾನೆ ಪಾಂಡವಪುರ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಸಾಕಷ್ಟು ಹಣ ಬಾಕಿ ಇದೆ. ಜೊತೆಗೆ ರಾಜ್ಯದ ಇತರೆ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರದ ಉತ್ತರದ ಪ್ರಕಾರ 184-96 ಕೋಟಿ ರೂಪಾಯಿಗಳನ್ನು ಪಾವತಿಸಲು ಬಾಕಿ ಇದೆ. ಸಕ್ಕರೆ ಕಾರ್ಖಾನೆಗಳಿಂದ ಸಕ್ಕರೆ ಬಿಡುಗಡೆ, ವಿಲೇ ಮಾಡುವುದಕ್ಕೆ ಸರ್ಕಾರದಿಂದ ಏನು ಪ್ರಯತ್ನ ಆಗಿದೆ ಎನ್ನುವುದನ್ನು ಕೇಳುವುದಕ್ಕೆ ಬಯಸುತ್ತೇನೆ. ಇನ್ನು ಕೇಂದ್ರ ಸರ್ಕಾರ ಖಾಸಗಿ ಕಾರ್ಖಾನೆಗಳಿಗೆ ಏನು ಹಣ ಕೊಡುತ್ತಿದೆ ಅದನ್ನು ರೈತರಿಗೆ ಪಾವತಿ ಮಾಡದೆ ಬೇರೆ ಕೆಲಸಗಳಿಗೆ ಉಪಯೋಗಿಸುವಂಥಾದ್ದು ಆಗುತ್ತಿದೆ, ಅದು ಆಗಬಾರದು. ಹಾಗೆಯೇ ಇವತ್ತು ಸಕ್ಕರೆ ದಾಸ್ತಾನು ಸಾಕಷ್ಟು ಇದ್ದರೂ ಕೂಡ ಮಾರುಕಟ್ಟೆಗೆ ಬಿಡುಗಡೆ ಮಾಡುವದಕ್ಕೆ ಅವರಿಗೆ ಅವಕಾಶ ಕೊಡುತ್ತಿಲ್ಲ. ಇದಕ್ಕೆ ಕಾರಣ ಏನು? ನಂತರ ನಿಷೇಧ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ಓದಿರುವಂಥಾದ್ದನ್ನು ಹೇಳುತ್ತೇನೆ. ಇದ್ದಂಥ ಕಬ್ಬನ್ನು ಬೇರೆ ರಾಜ್ಯಕ್ಕೆ ಹೋಗಿ ಮಾರಾಟ ಮಾಡಬಾರದೆಂದು ನಿಷೇಧ ಮಾಡಿದ್ದಾರೆ. ಅವರು ಬೇರೆ ರಾಜ್ಯಕ್ಕೆ ಹೋಗಿ ಮಾರಾಟ ಮಾಡಿದರೆ ಹೆಚ್ಚಿನ ಬೆಲೆ ಸಿಗುವಂಥಾದ್ದನ್ನು ತಪ್ಪಿಸಿದ ಹಾಗೆ ಆಗಿದೆ. ಅದರ ಜೊತೆಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಇಷ್ಟೊಂದು ಸಕ್ಕರೆ ದಾಸ್ತಾನು ಇದೆ. ಇದರ ಬಗ್ಗೆ ಸರ್ಕಾರದ ತೀರ್ಮಾನ ಏನು ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಕಳೆದ ವರ್ಷದ ಪ್ರೊಡಕ್ಷನ್ ಮತ್ತು ಈ ವರ್ಷ ಪ್ರೊಡಕ್ಷನ್ ಸೇರಿ ಈಗ ಹಾಲಿ 1380 ಕೋಟಿ ರೂಪಾಯಿಯ ಸ್ಟಾಕ್ಸ್ ಇದೆ. ಒಟ್ಟಾರೆ ನಮ್ಮ ಹತ್ತಿರ ಸುಮಾರು 2000 ಕೋಟಿ ರೂ. ಮೌಲ್ಯದ ಸಕ್ಕರೆ ಇತ್ತು.

10.10 ಎ.ಎಂ.

ಅದನ್ನು ಇಷ್ಟಕ್ಕೆ ತಂದಿದ್ದೇವೆ. ತಾವು ಮಾತನಾಡುತ್ತಾ, ಭಾರತ ಸರ್ಕಾರದ ಜೊತೆ ಮಾತನಾಡಿ ರಿಲೀಸ್‌ನ್ನು ಜಾಸ್ತಿ ಮಾಡಿಸುತ್ತೇವೆಂದು ಹೇಳಿದ್ದೀರಿ, ಅದು ಏನಾಯಿತು ಎಂದು ಕೇಳಿದಿರಿ. ಒಂದೂವರೆ ಪಟ್ಟು ಜಾಸ್ತಿ ಮಾಡಿಸಿದ್ದಕ್ಕೆ ಈಗ ಸ್ಟಾಕ್ ಇಷ್ಟು ಕಡಿಮೆ ಆಗಿದೆ. ಜೊತೆಗೆ ಎಕ್ಸ್‌ಪೋರ್ಟ್ ಮಾಡುವಂಥ ಕಾರ್ಖಾನೆಗಳು ಯಾವುವು ಇವೆ ಅವುಗಳಿಗೆ ಈ ಸರ್ಕಾರದ ಬಂದ ಮೇಲೆ ಹಲವಾರು ರಿಯಾಯಿತಿಗಳನ್ನು ಕೊಡುತ್ತಿದ್ದೇವೆ. ಎಕ್ಸ್‌ಪೋರ್ಟ್ ಮಾಡುವ ಕಬ್ಬಿನ ಮೇಲಿನ ಟ್ಯಾಕ್ಸನ್ನು ತೆಗೆದುಹಾಕಿದ್ದೇವೆ. ಈ ರೀತಿ ಎರಡು ಮೂರು ರೀತಿಯಲ್ಲಿ ನಾವು ಸಹಕಾರ ಮಾಡಿದ್ದೇವೆ. ಭಾರತ ಸರ್ಕಾರದವರೂ ಕೂಡ ಇದಕ್ಕೆ ಸ್ಪಂದಿಸಿದ್ದಾರೆ. ಹಾಗಾಗಿ ಸ್ಟಾಕ್ಸ್ ಪೊಜಿಷನ್ ಕಡಿಮೆಯಾಗಿದೆ. ನಾವು ಒಟ್ಟಾರೆಯಾಗಿ ಕಳೆದ ವರ್ಷದ ಸಾಲದ ಬಾಬ್ತು ಕೊಡಬೇಕಾಗಿರುವುದು 55 ಕೋಟಿ ರೂಪಾಯಿ ಮಾತ್ರ ಬಾಕಿ ಇದೆ. ಸನ್ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ ಕರೆಂಟ್

ಇಯರ್‌ನದ್ದು 240 ಕೋಟಿ ರೂಪಾಯಿ ಮಾತ್ರ ಬಾಕಿ ಇದೆ. ಕರೆಂಟ್ ಇಯರ್‌ನದ್ದು ಸಾಮಾನ್ಯವಾಗಿ ಬಾಕಿ ಇರುತ್ತದೆ. ಏಪ್ರಿಲ್, ಮೇ ತಿಂಗಳ ಹೊತ್ತಿಗೆ ಎಷ್ಟು ಉಳಿಯುತ್ತದೆ ಎಂಬುದನ್ನು ನಾವು ನೋಡಿಕೊಳ್ಳಬೇಕಾಗುತ್ತದೆ. Compared to any state in India we are in a better position. ಕಾರಣ ಏನೆಂದರೆ ಸುಮಾರು 800 ಕೋಟಿ ರೂಪಾಯಿಗಳಷ್ಟು ಹಣಕ್ಕೆ ಸರ್ಕಾರ ಗ್ಯಾರಂಟಿಯಾಗಿ ನಿಂತಿದೆ. ಪಾಂಡವಪುರ, ಮಂಡ್ಯದ 2-3 ಕಾರ್ಖಾನೆಗಳಿಗೆ ಸರ್ಕಾರ ಗ್ಯಾರಂಟಿಯಾಗಿ ನಿಂತು, ಫಸ್ಟ್ ಟೈಮ್ ಇಷ್ಟೊಂದು ಹಣವನ್ನು ನಾವು ಬಿ.ಡಿ.ಸಿ.ಸಿ. ಮತ್ತು ಅಪೆಕ್ಸ್ ಬ್ಯಾಂಕಿನಿಂದ ಕೊಡಿಸಿದ್ದೇವೆ. ಆದ್ದರಿಂದ ರೈತರ ವಿಚಾರದಲ್ಲಿ ಒಂದೂವರೆ, ಎರಡು ವರ್ಷದಿಂದ ಸಮಗ್ರವಾದ ಚಿಂತನೆ ಸರ್ಕಾರದಿಂದ ಏನು ನಡೆದಿದೆ, ಆ ಚಿಂತನೆಯ ಹಿನ್ನೆಲೆಯಲ್ಲಿ ಇದು 55 ಕೋಟಿ ರೂಪಾಯಿಗಳಿಗೆ ಬಂದು ನಿಂತಿದೆ. ಭಾರತ ಸರ್ಕಾರ ಕೆಲವು ನೀತಿಗಳನ್ನು ಮಾರ್ಪಾಡು ಮಾಡಿಕೊಳ್ಳಬೇಕೆಂದು ನಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹಲವಾರು ವಿಚಾರಗಳಲ್ಲಿ ನಮ್ಮ ಮೆಮೊರಾಂಡಂನ್ನು ಸಬ್‌ಮಿಟ್ ಮಾಡಿದ್ದೇವೆ. ಕೆಲವು ವಿಚಾರಗಳಿಗೆ ಅವರು ರೆಸ್ಪಾಂಡ್ ಮಾಡಿದ್ದಾರೆ. ಮೂಲಭೂತವಾದಂಥ ಕೆಲವು ವಿಚಾರಗಳಿಗೆ ಅವರು ರೆಸ್ಪಾಂಡ್ ಇನ್ನೂ ಮಾಡಲಿಲ್ಲ. ಅದರ ಜೊತೆಜೊತೆಯಲ್ಲಿ ಆರ್ಥಿಕ ಸಂಪನ್ಮೂಲಗಳ ವಿಚಾರದಲ್ಲಿ ಸರ್ಕಾರ ತನ್ನ ಗಮನವನ್ನು ಹರಿಸಿ ಡೈವರ್ಸಿಫಿಕೇಷನ್ ಆಫ್ ಪ್ರೊಡಕ್ಷನ್ ಆಕ್ಟಿವಿಟೀಸ್ ಅಂದರೆ ಬೇರೆ ಬೇರೆ ಬೈಪ್ರಾಕಡ್ಟ್ ವಿಚಾರದಲ್ಲಿ ಏನು ಚಿಂತನೆ ಮಾಡಬೇಕಾಗಿದೆ ಅದಕ್ಕೆ ಪರವಾನಗಿಗಳನ್ನು ಏನು ಭಾರತ ಸರ್ಕಾರ ಕೊಡಬೇಕಾಗಿದೆ ಅದಕ್ಕೂ ಕೂಡ ನಾವು ಸರ್ಕಾರದ ಜೊತೆ 3-4 ಸುತ್ತು ಮಾತುಕತೆಯನ್ನು ಮಾಡಿದ್ದೇವೆ. ಇದರ ಜೊತೆಯಲ್ಲಿ ಕರ್ನಾಟಕ ಸರ್ಕಾರ ಮಾಡುವಂಥಾದ್ದು ಏನೆಂದರೆ, ಡಿಸ್ಟಿಲರೀಸ್‌ಗಳಿಗೆ ಲೈಸೆನ್ಸ್‌ನ್ನು ಕೊಡುವಂಥ ವಿಚಾರ, ಎನರ್ಜಿ ಪ್ರೊಡಕ್ಷನ್‌ಗೆ ಅವಕಾಶ ಕೊಡುವಂಥ ವಿಚಾರ, ಇವತ್ತು ಪ್ರತಿ ಮೆಗಾವ್ಯಾಟ್‌ಗೆ ನಾವು 25 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಡುವಂಥ ವಿಚಾರವನ್ನು ಬಹುಶಃ ಫರ್‌ದರ್ ತ್ರೀ ಇಯರ್ಸ್‌ಗೆ ಎಕ್ಸ್‌ಟೆಂಡ್ ಮಾಡಿದ್ದೇವೆ. ಇವೆಲ್ಲವನ್ನೂ ಏಕೆ ಮಾಡುತ್ತಿದ್ದೇವೆಂದರೆ ರೈತನ ಆರ್ಥಿಕ ಸಂಕಷ್ಟವನ್ನು ತಪ್ಪಿಸಲಿಕ್ಕೆ ಸರ್ಕಾರ ಈ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ. ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿದರೆ ನಾವು ಬೆಟರ್ ಪೊಜಿಷನ್‌ನಲ್ಲಿ ಇದ್ದೇವೆ. ಯಾವ ಕಾರ್ಖಾನೆ ಮಾಲೀಕರು ಇವತ್ತು ತನ್ನ ರೈತರಿಗೆ ಕೊಡಬೇಕಾದಂಥ ಬಾಕಿ ವಿಚಾರದಲ್ಲಿ ತಾರತಮ್ಯ ಮಾಡುವುದು ಅಥವಾ ಬೇಜವಾಬ್ದಾರಿತನ ಮಾಡುವುದು ಅಥವಾ ಸಕ್ಕರೆ ಮಾರಾಟ ಮಾಡಿಕೊಂಡು ತನ್ನ ಸ್ವಂತಕ್ಕೆ ಉಪಯೋಗ ಮಾಡುವಂಥ ಪ್ರವೃತ್ತಿ ಏನಿತ್ತೋ ಅಂಥ ಕಾರ್ಖಾನೆಗಳ ಮೇಲೆ ಕಠಿಣವಾದಂಥ ಕ್ರಮ ತೆಗೆದುಕೊಂಡು ಅವರ ಆಸ್ತಿಗಳನ್ನೂ ಕೂಡ ಮುಟ್ಟುಗೋಲು ಹಾಕಿಕೊಂಡಿದ್ದೇವೆ. ನಮ್ಮ ಶುಗರ್ ಕಂಟ್ರೋಲ್ ಆಕ್ಟ್‌ನ್ನು ಅನುಸರಿಸಿ ಅವರ ಮೇಲೆ ಬಹಳಷ್ಟು ಸ್ಟ್ರಿಕ್ಟ್ ಆಕ್ಷನ್‌ಗಳನ್ನು ತೆಗೆದುಕೊಂಡಿದ್ದೇವೆ. ಬಹುಶಃ ರಾಜ್ಯದ

ಇತಿಹಾಸದಲ್ಲಿಯೇ ಅವರ ಪ್ರಾಪರ್ಟಿಯನ್ನು ಆಕ್ಷನ್ ಮಾಡಿದಂಥ ಮತ್ತೊಂದು ಗೌವರ್ನ್‌ಮೆಂಟ್‌ನಲ್ಲಿ ಉದಾಹರಣೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಅಂತೂ ಅದನ್ನು ಮಾಡಿದ್ದೇವೆ, because we are too much concerned for the welfare of the farmers. ಅವರ ಆರ್ಥಿಕ ಸಂಕಷ್ಟಗಳು ನೀವು ಹೇಳಿದ ಹಾಗೆ ನಮಗೂ ಕೂಡ ಅದು ಮನಸ್ಸಿಗೆ ಬಂದಿದೆ. ಅದಕ್ಕೆ ನಾವು ಯಾವ ಒಂದು ಮುಲಾಜನ್ನೂ ತೋರಿಸದೆಯೇ ರೈತರ ಪರವಾಗಿ ಇಷ್ಟೆಲ್ಲಾ ಸಮಗ್ರವಾದಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇನ್ನು ಕಬ್ಬು ಹೊರರಾಜ್ಯಗಳಿಗೆ ಹೋಗುವ ವಿಚಾರವನ್ನು ಶ್ರೀ ಬಚ್ಚೇಗೌಡರು ಜನರಲ್ ಆಗಿ ಹೇಳಿದ್ದಾರೆ ನಿಜ. ಟ್ಯಾಕ್ಸ್ ರೂಪದಲ್ಲಿ ನಮ್ಮ ಸಂಪತ್ತಿಗೆ ಬರಬೇಕಾದಂಥ ನೂರಾರು ಕೋಟಿ ರೂಪಾಯಿಗಳು ಏನು ಸೋರಿ ಹೋಗುತ್ತಿತ್ತು ಹಾಗೆ ಸೋರಿ ಹೋಗುವಂಥಾದ್ದನ್ನು ತಪ್ಪಿಸಬೇಕೆಂದು ಬೇರೆ ರಾಜ್ಯಗಳಿಗೆ ಅಂದರೆ ಅದು ಮಹಾರಾಷ್ಟ್ರ ಇರಬಹುದು, ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ಇರಬಹುದು, ಅಲ್ಲಿಗೆ ಕಬ್ಬು ಹೋಗುವುದನ್ನು ನಾವು ತಡೆದೆವು, ನಿಜ. ತದನಂತರ ನಮ್ಮಲ್ಲಿರುವಂಥ ಫ್ಯಾಕ್ಟರಿಗಳಿಗೆ ಪ್ರೊಡಕ್ಷನ್‌ಗೆ ಯಾವಾಗ ರಾಮೆಟೀರಿಯಲ್ಸ್ ಸಾಕಾಗದಿರುವಂಥ ಪರಿಸ್ಥಿತಿ ಬಂತೋ, ಉದಾಹರಣೆಗೆ,- ಬೀದರ್, ಬೆಳಗಾಂನ ಕೆಲವು ತಾಲ್ಲೂಕುಗಳಿಗೆ ನಾವು ಎಕ್ಸ್‌ಕ್ಲೂಸೀವ್ ಏರಿಯಾಗಳಿಗೆ ಮಾತ್ರ ರಿಲ್ಯಾಕ್ಸ್ ಮಾಡಿ ಪುನಃ ಪರ್ಮಿಷನ್ ಕೊಟ್ಟಿದ್ದೇವೆ. ಯಾವ ಯಾವ ಪ್ರದೇಶಗಳಲ್ಲಿ ಶಾಸನಸಭಾ ಸದಸ್ಯರಿಂದ ನಮಗೆ ಮನವಿ ಬಂದವೋ, ಕಳೆದ ಸಾರಿ ಇದೇ ಸದನದಲ್ಲಿ 3-4 ಎಂ.ಎಲ್.ಎ.ಗಳು ಮಾತನಾಡಿದರು, ಅಂಥವುಗಳಿಗೆಲ್ಲಾ ಎಕ್ಸ್‌ಂಷನ್ ಕೊಟ್ಟಿದ್ದೇವೆ. ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಲಿಕ್ಕೆ ಹೋಗಿಲ್ಲ. ಜನರಲ್ ಡಿಶಿಷನ್ ಮಾಡಿದರೂ ಕೂಡ Depending upon each Industry and Taluk, ಎಲ್ಲಿ ಎಕ್ಸಸ್ ಪ್ರೊಡಕ್ಷನ್ ಆಗಿ ಮಿಲ್ ಮಾಡಲಿಕ್ಕೆ ಅವಕಾಶಗಳು ಇಲ್ಲದಿದ್ದಾಗ ಪರ್ಮಿಷನ್ ಕೊಟ್ಟಿದ್ದೇವೆ. ಆ ತರಹದ್ದು ಇನ್ನು ಯಾವುದಾದರೂ ನಿಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅದನ್ನೂ ಕೂಡ ಸುಧಾರಣೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಕಬ್ಬು ಸಾಗಾಣಿಕೆ ನಿಷೇಧದ ಬಗ್ಗೆ ಮಾನ್ಯ ಸಚಿವರಿಗೆ ಮನವಿ ಪತ್ರ ಕೊಡಬೇಕು, ಮತ್ತು ಅವರಿಗೆ ಬೀದರ್ ಮತ್ತು ಬೆಳಗಾಂನದ್ದು ಒತ್ತಡ ಬಂದಾಗ ನಿಷೇಧ ತೆಗೆಯುತ್ತೇವೆಂದು ಹೇಳಿದರು. ಆದರೆ ನಿಷೇಧ ಹೇರುವಂಥ ಅವಶ್ಯಕತೆ ಏನಿತ್ತು? ರೈತರು ಬೆಳೆದ ಕಬ್ಬಿಗೆ ಬೇರೆ ರಾಜ್ಯದಲ್ಲಿ ಮಾರಾಟ ಮಾಡಿದರೆ ಒಳ್ಳೆಯ ಬೆಲೆ ಬರುತ್ತದೆಂದರೆ ರೈತರು ಏಕೆ ಮಾರಾಟ ಮಾಡಬಾರದು? ಅವರು ಏಕೆ ಉದ್ಧಾರವಾಗಬಾರದು? ನಿಷೇಧ ಮಾಡುವುದರಿಂದ ಇದು ರೈತರ ಶೋಷಣೆಯಾಗುತ್ತದೆ. ಈ ರೀತಿ ನಿರ್ಣಯ ಕೈಗೊಳ್ಳುವಂಥಾದ್ದು ತಪ್ಪು. ಸ್ಪೆಸಿಫಿಕ್ ಆಗಿ ಕೆಲವೊಂದು ಸ್ಥಳಗಳಲ್ಲಿನ ನಿಷೇಧವನ್ನು ತೆಗೆಯುತ್ತಿದ್ದೀರಿ. ಇದು ಸರಿಯಲ್ಲ. ಎಲ್ಲಾ ಕಡೆಯಲ್ಲಿಯ ನಿಷೇಧವನ್ನು ತೆಗೆಯಬೇಕು. ರೈತರಿಗೆ ಒಳ್ಳೆಯ ರೇಟ್ ಬಂದು ಅನುಕೂಲವಾಗುವಂತಿದ್ದರೆ ಬೇರೆ ಕಡೆ ಮಾರಾಟ

ಮಾಡಲಿ. ಅದಕ್ಕಾಗಿ ಸಂಪೂರ್ಣವಾಗಿ ನಿಷೇಧವನ್ನು ತೆಗೆಯಬೇಕೆನ್ನುವಂಥಾದ್ದು ನಮ್ಮ ಒತ್ತಾಯವಾಗಿದೆ. ಇನ್ನು ಕೆಲವು ಕಡೆ ರೈತರ ಕಬ್ಬಿಗೆ ಪೇಮೆಂಟ್ ಮಾಡುವ ಸಲುವಾಗಿ ಕೆಲವೊಂದು ಕಾರ್ಖಾನೆಗಳಿಗೆ ಹಣ ಕೊಟ್ಟಿದ್ದೀರಿ, ಆ ಹಣವನ್ನು ರೈತರ ಪೇಮೆಂಟ್‌ಗೆ ಉಪಯೋಗ ಮಾಡದೆ ಬೇರೆ ಯಾವುದಕ್ಕೋ ಉಪಯೋಗ ಮಾಡುತ್ತಿದ್ದಾರೆ. ಅಂಥವುಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಹಾಗೆಯೇ ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾಂನಲ್ಲಿ ಮಾಡುತ್ತೇವೆಂದು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ ಅನೌನ್ಸ್ ಮಾಡಿದ್ದರು. ಅನಂತರ ತಾವು ಬೆಳಗಾಂಗೆ ಹೋಗಿದ್ದಾಗ – ಅಲ್ಲಿ ಇದ್ದಂಥ ಜನಪ್ರತಿನಿಧಿಗಳು ಸಕ್ಕರೆ ನಿರ್ದೇಶನಾಲಯ ಬೆಳಗಾಂನಲ್ಲಿ ಬೇಡವೆಂದು ಹೇಳಿದ್ದಾರೆ. ಅದಕ್ಕಾಗಿ ನಾವು ಅಲ್ಲಿಗೆ ಷಿಫ್ಟ್ ಮಾಡಿಲ್ಲ ಎನ್ನುವಂಥ ಮಾತನ್ನು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಕ್ಕರೆ ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ, ಆ ಜನ ಪ್ರತಿನಿಧಿಗಳು ಯಾರು? ಅವರ ಹೆಸರನ್ನು ದಯವಿಟ್ಟು ಬಹಿರಂಗ ಮಾಡಬೇಕು. ಈ ಸಕ್ಕರೆ ನಿರ್ದೇಶನಾಲಯ ಬೆಳಗಾಂಗೆ ಬರಬಾರದೆಂದು ನಾವು ಯಾರು ಹೇಳಿಲ್ಲವೆಂದು ಅಲ್ಲಿಯ ಜನಪ್ರತಿನಿಧಿಗಳು ರಿಯಾಕ್ಷನ್ ಕೊಟ್ಟಿದ್ದಾರೆ. ಹಾಗಾದರೆ ಜನಪ್ರತಿನಿಧಿಗಳು ಯಾರು ಬೇಡವೆಂದು ಹೇಳಿದ್ದಾರೆ? ಏಕೆಂದರೆ ಉತ್ತರ ಕರ್ನಾಟಕ ಭಾಗಕ್ಕೆ ಇವೆಲ್ಲಾ ಡೀಸೆಂಟ್ರಲೈಜೇಷನ್ ಆಗಬೇಕು, ಇವೆಲ್ಲಾ ಕಚೇರಿಗಳು ಬರಬೇಕೆನ್ನುವ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಅನೌನ್ಸ್ ಮಾಡಿದರು. ಆದರೆ ಇಲ್ಲಿಯವರೆಗೆ ಅನುಷ್ಠಾನ ಆಗಲಿಲ್ಲ. ಹಾಗಾದರೆ ಯಾರು ಅಡೆತಡೆ ಮಾಡುತ್ತಿದ್ದಾರೆ. ಅದನ್ನು ದಯವಿಟ್ಟು ತಾವು ಸದನದಲ್ಲಿ ಡಿಸ್‌ಕ್ಲೋಸ್ ಮಾಡಬೇಕು.

ಶ್ರೀ ಎ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು 2-3 ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ಬ್ಯಾನ್ ಮಾಡುವ ವಿಚಾರದಲ್ಲಿ ರೈತರಿಗೆ ಹೈಯರ್ ರೇಟ್ ಸಿಗುತ್ತದೆ, ನೀವು ಏಕೆ ಬ್ಯಾನ್ ಮಾಡುತ್ತೀರೆಂದು ಕೇಳಿದರು. ಬ್ಯಾನ್ ಮಾಡಬೇಕೆಂದು ಹೇಳಿ ಪ್ರಥಮವಾಗಿ ನಾವು ಸರ್ಕಾರ ರಚನೆ ಮಾಡಿದ ವರ್ಷದಲ್ಲಿ ಅಂದರೆ 2000-2001ನೇ ವರ್ಷದಲ್ಲಿ ನಮ್ಮ ರೈತರು ಬ್ಯಾನ್ ಮಾಡಿದ್ದನ್ನು ತೆಗೆಯಿರಿ ಎಂದು ಬಂದರು. ತಮಗೆ ನೆನಪು ಇರಬಹುದು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ನಮ್ಮ ರಾಜ್ಯದಲ್ಲಿ ಬೆಳೆದ ಕಬ್ಬು ಎಕ್ಸಸ್ ಇದೆ, ಅದನ್ನು ತೆಗೆದುಕೊಳ್ಳಿ ಎಂದು ಆ ರಾಜ್ಯದ ಮುಖ್ಯಮಂತ್ರಿಗಳ ಜೊತೆಗೆ 3-4 ಸಾರಿ ಭೇಟಿ ಮಾಡಿದೆವು. ಒಂದೇ ರೀತಿ ಕಾನೂನನ್ನು ನಾವು ಜಾರಿ ಮಾಡಲಿಕ್ಕೆ ಹಲವು ಸಂದರ್ಭಗಳಲ್ಲಿ ತೊಂದರೆಯಾಗುತ್ತದೆ. ಎರಡು ವರ್ಷಗಳ ಹಿಂದೆ ಎಕ್ಸಸ್ ಪ್ರೊಡಕ್ಷನ್ ಇತ್ತು. ಈ ವರ್ಷ ಕೆಲವು ತಾಲ್ಲೂಕುಗಳಲ್ಲಿ ಲೋ-ಪ್ರೊಡಕ್ಷನ್ ಇದೆ. ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಕಾಲಕಾಲಕ್ಕೆ ರೈತರಿಗೆ ಅನುಕೂಲ ಆಗುವಂಥ ತೀರ್ಮಾನ, ನಿರ್ಣಯಗಳನ್ನು ಮಾಡಬೇಕೇ ವಿನಃ ಜನರಲ್ ಡಿಶಿಷನ್ ಮಾಡಿದರೆ ಅದರಲ್ಲಿ ಅಪಾಯವಿದೆ. ಹೊರಗಡೆ ರಾಜ್ಯದವರಿಗೆ ಕಬ್ಬು

ಕೊಡುವುದು ಬೇಡ, ನಮ್ಮ ರಾಜ್ಯ ಸರ್ಕಾರಕ್ಕೆ ಕೋಟಿಗಟ್ಟಲೆ ಹಣ ನಷ್ಟವಾಗುತ್ತದೆ, ಬ್ಯಾನ್ ಮಾಡಿ ಎಂದು ಈ ಸದನದಲ್ಲಿಯೇ ಕೆಲವು ಸದಸ್ಯರು ಹೇಳಿದರು. ತಮಗೆ ನೆನಪು ಇದ್ದ ಹಾಗೆ ಬ್ಯಾನ್ ಮಾಡುವುದು ಬೇಕೋ ಬೇಡವೋ ಎಂದು ಹೇಳಿ ಎಲ್ಲಾ ಪಾರ್ಲಿಮೆಂಟ್ ಮೆಂಬರ್ಸ್, ಎಂ.ಎಲ್.ಎ.ಗಳನ್ನು ಕರೆದು ಬೆಳಗಾಂನಲ್ಲಿ ಮೀಟಿಂಗ್ ಮಾಡಿದೆ. ಬೆಳಗಾಂನಲ್ಲಿ ಮೀಟಿಂಗ್ ಮಾಡಿದಾಗ ಅಲ್ಲಿ ಕೆಲವರಲ್ಲಿ ಡಿವೈಡೆಡ್ ಒಪೀನಿಯನ್ ಇತ್ತು. ಕೆಲವು ತಾಲ್ಲೂಕುಗಳಲ್ಲಿ ಉದಾಹರಣೆಗೆ ಇಂಡಿ, ಇಲ್ಲಿ ಇವರು ನಮಗೆ ಕಾರ್ಖಾನೆಗಳು ಇಲ್ಲ, ಕಳುಹಿಸಿಕೊಡಿರಿ ಎಂದು ಹೇಳಿದರು. ಬೀದರ್‌ನಲ್ಲಿ ನಮ್ಮ ಕಾರ್ಖಾನೆಗಳಿಗೆ ಪ್ರೊಡಕ್ಷನ್ ಸಾಲದು ಕಳುಹಿಸಿರಿ ಎಂದರು. ಮತ್ತು ತಮ್ಮ ಪಕ್ಷದ ಶಾಸನಸಭಾ ಸದಸ್ಯರು ಸೇರಿ ನೇರವಾಗಿ ಪತ್ರಗಳನ್ನು ಬರೆದರು. ಏನೆಂದರೆ – ಇಲ್ಲ, ನೀವು ಪರ್ಮಿಷನ್ ಕೊಡಿ ಎಂದು. ಹೀಗೆ ಆಯಾಯ ಸಂದರ್ಭಕ್ಕೆ ಅನುಸಾರವಾಗಿ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಮಾಡಿದೆಯೇ ವಿನಃ ಬೇರೆ ಯಾವ ಕಾರಣವೂ ಇದರಲ್ಲಿ ಉಳಿದಿಲ್ಲ. ಮುಂದೆ ಈ ಪ್ರೊಡಕ್ಷನ್ ಹೇಗೆ ಬರುತ್ತದೆ ಎಂಬುದನ್ನು ನೋಡಿಕೊಂಡು ಯಾವಾಗ ನಮ್ಮ ರೈತರಿಗೆ ಅನುಕೂಲವಾಗುತ್ತದೆ, ಆ ರೀತಿಯಾದ ನಿರ್ಣಯಗಳನ್ನು ಮಾಡಿದ್ದೇವೆ. ಕಬ್ಬನ್ನು ತೆಗೆದುಕೊಳ್ಳಿ ಎಂದು ಆ ಮುಖ್ಯಮಂತ್ರಿಗಳಿಗೆ ನಾವು ಮೂರು ಸಾರಿ ಹೋಗಿ ಅಪೀಲುಗಳನ್ನು ಕೊಟ್ಟಿವು. ಹಿಂದೆ ಇದ್ದ ಎಕ್ಸ್‌ಸ್ಟೆಲ್ಲಾ ಪಕ್ಕದಲ್ಲಿ ಕೊಟ್ಟು ಸುಮಾರು 27 ಲಕ್ಷ ಟನ್ ಕಬ್ಬನ್ನು ನಾವು ಅಲ್ಲಿ ಸುರಿಯಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಹೀಗೆ ಆ ಸಂದರ್ಭವನ್ನು ನೋಡಿಕೊಂಡು, ರೈತರ ಹಿತವನ್ನು ಗಮನದಲ್ಲಿಟ್ಟಕೊಂಡು ಸರ್ಕಾರ ರೈತರ ಪರವಾಗಿ ನಿರ್ಣಯ ಮಾಡುತ್ತದೆಂದು ಸದನದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ಹೇಳಲಿಕ್ಕೆ ಬಯಸುತ್ತೇನೆ. ಇನ್ನೊಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದೇನೆಂದರೆ ಅಪೆಕ್ಸ್ ಬ್ಯಾಂಕ್, ಬಿ.ಡಿ.ಸಿ.ಸಿ. ಬ್ಯಾಂಕ್ ಹೀಗೆ ಇತರೆ ಬ್ಯಾಂಕ್‌ಗಳಿಂದ ದುಡ್ಡನ್ನು ಕೊಡಿಸಿದಿರಿ, ಆದರೆ ಆ ದುಡ್ಡನ್ನು ಅವರು ಖಾಸಗಿಯಾಗಿ ಏನೋ ಬೇರೆ ವೆಚ್ಚಗಳಿಗೆ ಭರಿಸಿಕೊಂಡಿದ್ದಾರೆ, ರೈತರಿಗೆ ಆ ಹಣ ತಲುಪಿಲ್ಲ ಎಂದು. ಹಾಗಾಗುವುದಕ್ಕೆ ಸಾಧ್ಯವಿಲ್ಲ. ಈ ಸಾರಿ ತಮಗೆ ಗೊತ್ತಿದ್ದ ಹಾಗೆ ಸರ್ಕಾರ ಎಲ್ಲೆಲ್ಲಿ ಬಿ.ಡಿ.ಸಿ.ಸಿ. ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ನಲ್ಲಿ ನೆರವನ್ನು ಕೊಡಿಸಿ ನಾವು ಗ್ಯಾರಂಟಿ ತೆಗೆದುಕೊಂಡಿದ್ದೇವೆ. We have asked our Deputy Commissioners to scrutinise the whole thing and to ensure that money reaches only to the farmers. ಅದನ್ನು ಈ ಸಾಲಿನಲ್ಲಿ ಮಾಡಿಕೊಂಡು ಬಂದಿದ್ದೇವೆ. ಆ ತರಹ ದುರುಪಯೋಗವಾಗಿದೆ, ನಾವು ಏನೋ 25 ಕೋಟಿ ರೂಪಾಯಿ ಸಾಲ ಕೊಡುಸುತ್ತೇವೆ, ಆ 25 ಕೋಟಿ ರೈತರಿಗೆ ತಲುಪದೆ, ಅವರೇ ತಮ್ಮ ಸ್ವಂತ ಖಾಸಗಿ ವಿಚಾರಗಳಿಗೆ ಉಪಯೋಗ ಮಾಡಿಕೊಂಡಿದ್ದಾರೆ ಎನ್ನುವ ಇನ್ಸಿಡೆಂಟ್ ಯಾವುದಾದರೂ ಇದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ತಿಳಿಸಲಿ. ನಾನು ಅಂಥವರ ಮೇಲೆ ತತ್‌ಕ್ಷಣದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಆದ್ದರಿಂದ ಇದು ಒಂದು ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್‌ನ್ನು ನಾನು ಕೊಡುತ್ತಿದ್ದೇನೆ. ಇನ್ನು ಡೈರೆಕ್ಟೊರೇಟ್ ವಿಚಾರದಲ್ಲಿ ಹೇಳುವುದಾದರೆ, ತಮಗೆ ಗೊತ್ತಿದ್ದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ

ಏನು ಆ ವಚನವನ್ನು ಕೊಟ್ಟಿದ್ದರು ಆ ಪ್ರಕಾರ ನಾವು ಬೆಳಗಾಂಗೆ ಬಂದು ಉದ್ಘಾಟನೆಯನ್ನೂ ಕೂಡ ಮಾಡಿದೆವು. ಕಟ್ಟಡವನ್ನು ತೆಗೆದುಕೊಂಡಿದ್ದೇವೆ. ತದನಂತರ ಪಾರ್ಲಿಮೆಂಟ್ ಸದಸ್ಯರು, ಎಂ.ಎಲ್.ಎ.ಗಳು ಬಂದು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದರು. ಭೇಟಿ ಮಾಡಿ you have to go slow on the opening of the Directorate in Belgaum as it is going to create inconvenience instead of convenience ಎಂದು ಹೇಳಿ ಅವರಿಗೆ ಅಪೀಲ್ ಕೊಟ್ಟರು. ಹಾಗೆ ಅಪೀಲ್ ಕೊಟ್ಟ ಹಿನ್ನೆಲೆಯಲ್ಲಿ ನಾವು ಅದನ್ನು ಇವತ್ತು ತಡೆಹಿಡಿದಿದ್ದೇವೆ. ಆ ಭಾಗದ ಶಾಸನಸಭಾ ಸದಸ್ಯರು ಭೇಟಿ ಮಾಡಿದ್ದಾರೆಂದು there is direction from the CM's office ಅದನ್ನು ಸ್ವಲ್ಪ ಸ್ಲೋ ಮಾಡಿ, ನಂತರ ಇನ್ನೊಂದು ಸಾರಿ ಅವರೆಲ್ಲರ ಜೊತೆ ಕುಳಿತು ಮಾತನಾಡಿಸಿ, ಬೆಳಗಾಂನಲ್ಲಿ ಮಾಡಲೇಬೇಕೆನ್ನುವುದಾದರೆ ಅಲ್ಲಿಯೇ ಮಾಡೋಣ ಎಂದು ಹೇಳಿದರು. ಆ ಕಾರಣದಿಂದ ನಿಂತಿದೆಯೇ ವಿನಃ ಸರ್ಕಾರದ ಇಚ್ಛೆ ಏನಿತ್ತೋ ಅದನ್ನು ನಾವು ಅನುಷ್ಠಾನಕ್ಕೆ ತಂದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇದು ಸುಮ್ಮನೆ ಯಾರೋ ಒಬ್ಬ ಜನಪ್ರತಿನಿಧಿಯ ನೆಪ ಎಂದು ಹೇಳಿ ಉತ್ತರ ಕರ್ನಾಟಕಕ್ಕೆ ಬರುವಂಥ ಕಛೇರಿಗಳನ್ನು ಅಲ್ಲಿಗೆ ಬರದ ಹಾಗೆ ಸರ್ಕಾರದವರು ಅವಾಯ್ಡ್ ಮಾಡುತ್ತಿದ್ದಾರೆ. ಹಾಗಾದರೆ ಆ ಜನಪ್ರತಿನಿಧಿ ಯಾರು ಎಂದು ಹೇಳಿ? ಯಾರು ಹಾಗೆ ಮನವಿ ಕೊಟ್ಟಿದ್ದಾರೆ? ಅವರ ಹೆಸರನ್ನು ಇಲ್ಲಿ ಡಿಸ್‌ಕ್ಲೋಸ್ ಮಾಡಿ.

SRI A.KRISHNAPPA:- The Government's intention is very clear on the subject. We have committed and we have opened the office. ಆದ್ದರಿಂದ ಎರಡನೇ ಪ್ರಶ್ನೆ ಏನೂ ಇಲ್ಲ ಸರ್ಕಾರಕ್ಕೆ.

ಶ್ರೀ ಜಗದೀಶ್ ಶೆಟ್ಟರ್:- ಆ ಭಾಗದ ಶಾಸನ ಸಭಾ ಸದಸ್ಯರು ಎಂದು ತಾವು ಹೇಳಿದಿರಿ, ದಯಮಾಡಿ ಅವರು ಯಾರು ಎಂಬುದನ್ನು ತಾವು ಹೇಳಬೇಕು. ದಯಮಾಡಿ ಅವರ ಹೆಸರುಗಳನ್ನು ತಿಳಿಸಿ.

ಶ್ರೀ ಎ.ಕೃಷ್ಣಪ್ಪ:- ಬೇಕಾದಾಗ ಹೆಸರುಗಳನ್ನು ಹೇಳುತ್ತೇವೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್:- ಇದರ ಬಗ್ಗೆ ಚರ್ಚೆ ಮಾಡಬೇಕು, ಸುಮ್ಮನೆ ಯಾರೋ ಜನಪ್ರತಿನಿಧಿಗಳ ಮೇಲೆ ಹುನ್ನಾರ ಹಾಕಿ ಉತ್ತರ ಕರ್ನಾಟಕದ ಕಡೆ ಬರುವಂಥ ಕಛೇರಿಗಳನ್ನು ನೀವು ಅವಾಯ್ಡ್ ಮಾಡುತ್ತಿದ್ದೀರಿ. ಹಾಗಾದರೆ ಯಾರು ಜನಪ್ರತಿನಿಧಿ ಮನವಿ ಪತ್ರ ಕೊಟ್ಟಿದ್ದಾರೆ ಅವರು ಹೆಸರು ಹೇಳಿ ಅದನ್ನು ಡಿಸ್‌ಕ್ಲೋಸ್ ಮಾಡಿ. ಮಾನ್ಯ

ಕೃಷ್ಣಪ್ಪನವರು, ಬೆಳಗಾವಿ ಜಿಲ್ಲೆಯ ಶಾಸಕರು ಸಕ್ಕರೆ ನಿರ್ದೇಶನಾಲಯ ಇಲ್ಲಿ ಬರಬಾರದು ಎಂದು ಹೇಳಿದ್ದಾರೆಂದು ಹೇಳಿದರು, ಹಾಗಾದರೆ ಯಾರು ಎಂಬ ಬಗ್ಗೆ ಹೆಸರು ಹೇಳಿ.

ಶ್ರೀ ಎ.ಕೃಷ್ಣಪ್ಪ:- ಬೆಳಗಾವಿ ಒಂದೇ ಅಲ್ಲ. We have taken as a total component of North Karnataka. ಮಾನ್ಯ ಸಭಾಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಸರ್ಕಾರ ತನ್ನ ನೀತಿಯ ವಿಚಾರದಲ್ಲಿ ಈಗಾಗಲೇ ನಾವು ಜಾರಿ ಮಾಡಿದ್ದೇವೆ, ನಾವು ವಚನಭ್ರಷ್ಟರಾಗಲಿಲ್ಲ. ಇವತ್ತಿಗೂ ಕೂಡ ಎಲ್ಲಾ ಜಿಲ್ಲೆಗಳನ್ನು ಸೇರಿಸಿ ಸಭೆ ಕರೆಯುತ್ತೇವೆ, ನಿಮ್ಮ ಅಭಿಪ್ರಾಯ ಅದೇ ಆದರೆ...

ಶ್ರೀ ಜಗದೀಶ್ ಶೆಟ್ಟರ್:- ಯಾವ ಜನಪ್ರತಿನಿಧಿಗಳು ನಿಮಗೆ ಮನವಿ ಪತ್ರ ಕೊಟ್ಟಿದ್ದಾರೆ ಅವರ ಹೆಸರನ್ನು ಡಿಸ್‌ಕ್ಲೋಸ್ ಮಾಡಿ. ನನ್ನ ಅಭಿಪ್ರಾಯದ ಪ್ರಕಾರ ಯಾರೂ ಕೊಟ್ಟಿಲ್ಲ, ಸುಮ್ಮನೆ ಜನಪ್ರತಿನಿಧಿಗಳ ಮೇಲೆ ಗೂಬೆ ಕೂರಿಸಬೇಡಿ, ನೀವು ನಿರ್ದೇಶನಾಲಯವನ್ನು ಸ್ಥಳಾಂತರಿಸುವುದನ್ನು ನಿಲ್ಲಿಸಬಾರದು.

ಶ್ರೀ ಎ.ಕೃಷ್ಣಪ್ಪ:- ನಾವು ನಮ್ಮ ವಿಚಾರದಲ್ಲಿ ಕಾರ್ಯರೂಪಕ್ಕೆ ತಂದಿದ್ದೇವೆ. ಮತ್ತೆ ನಾನು ಇದರ ಬಗ್ಗೆ ಡಿಸ್‌ಕಷನ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಇದು ಬಹಳ ಸೀರಿಯೆಸ್ಸಾದ ವಿಚಾರ, ಜನಪ್ರತಿನಿಧಿಯ ಹೆಸರು ಹೇಳುವುದಕ್ಕೆ ಇವರು ತಯಾರು ಇಲ್ಲ. ಬೆಂಗಳೂರಿನಲ್ಲಿದ್ದಂಥ ಕೇಂದ್ರ ಕಛೇರಿಗಳು ಉತ್ತರ ಕರ್ನಾಟಕಕ್ಕೆ ಹೋಗಬೇಕಾದರೆ ಅಧಿಕಾರಿಗಳು ಅಡ್ಡಗಾಲು ಹಾಕುತ್ತಿದ್ದಾರೆ. ಅಧಿಕಾರಿಗಳ ಮಾತು ಕೇಳಕೊಂಡು ಇವರು ಸುಮ್ಮನೆ ಜನಪ್ರತಿನಿಧಿಗಳೆಂದು ಹೇಳುತ್ತಿದ್ದಾರೆ ಇದು ತಪ್ಪು ಇದಕ್ಕೆ ತಪ್ಪು ಉತ್ತರವನ್ನು ಕೊಡುತ್ತಿದ್ದಾರೆ. ಇದು ಬಹಳ ಗಂಭೀರವಾದ ವಿಷಯವಾಗಿರುವುದರಿಂದ ಆ ಶಾಸಕರ ಹೆಸರನ್ನು ಡಿಸ್‌ಕ್ಲೋಸ್ ಮಾಡಲಿ.

ಅಧ್ಯಕ್ಷರು:- ಈ ಪ್ರಶ್ನೆಗೆ ಈಗಾಗಲೇ 20 ನಿಮಿಷಗಳು ಕಳೆದು ಹೋಯಿತು. ಹೀಗಾದರೆ ಇನ್ನು ಮೂರು ಪ್ರಶ್ನೆಗಳನ್ನು ಮಾತ್ರ ನಾನು ತೆಗೆದುಕೊಳ್ಳಬೇಕಾಗುತ್ತದೆ.... ಪ್ರಶ್ನೋತ್ತರವೇ ಎರಡು ಗಂಟೆ ಚರ್ಚೆ ಮಾಡಬೇಕೆಂದರೆ ಒಂದು ಅಮೆಂಡ್‌ಮೆಂಟ್ ತನ್ನಿ.....

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ):- ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದರು. ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾಂಗೆ ವರ್ಗಾವಣೆ ಮಾಡುವ ಬಗ್ಗೆ ಅನೇಕ ಶಾಸಕರು ಹಾಗೂ ನಾನೂ ಕೂಡ ಆ ಸಭೆಯಲ್ಲಿ ಇದ್ದೆ. ನಾನು

ನನ್ನ ಅಭಿಪ್ರಾಯವನ್ನು ಬಹಳ ಸ್ಪಷ್ಟವಾಗಿ ಸದನದಲ್ಲೂ ಕೂಡ ಹೇಳಿದ್ದೇನೆ. ಯಾವುದೇ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಹೊರಗೆ ತೆಗೆದುಕೊಂಡು ಹೋದಾಗ, ಶಾಸಕರಿಗೆ ಮತ್ತು ಬೇರೆ ಬೇರೆ ಭಾಗದಿಂದ ಬರುವ ಜನರಿಗೆ ಅನಾನುಕೂಲವಾಗುತ್ತದೆ. ಸಕ್ಕರೆ ನಿರ್ದೇಶನಾಲಯ ಬೆಳಗಾಂಗೆ ಹೋದರೆ, ಮೀನುಗಾರಿಕೆ ನಿರ್ದೇಶನಾಲಯ ಮಂಗಳೂರಿಗೆ ಹೋದರೆ, ಬೇರೆ ಬೇರೆ ಭಾಗದ ಶಾಸಕರುಗಳಿಗೆ ಬೆಳಗಾಂಗೆ ಮತ್ತು ಮಂಗಳೂರಿಗೆ ಹೋಗಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಭಾಗದವರಿಗೆ ಸಕ್ಕರೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟಂತಹ ಕಡತಗಳು ಬೆಳಗಾಂಗೆ ಹೋಗಿ ಪುನಃ ವಾಪಸ್ ಬರುವುದಕ್ಕೆ ತಡವಾಗುತ್ತದೆ, ಏಕೆಂದರೆ, ಸಕ್ಕರೆ ಸಚಿವರು ಹಾಗೂ ಕಾರ್ಯದರ್ಶಿಗಳು ಬೆಂಗಳೂರಿನಲ್ಲಿ ಇರುವಾಗ, ನಿರ್ದೇಶನಾಲಯವನ್ನು ಅಲ್ಲಿ ಮಾಡಿದರೆ ಅದು ತಪ್ಪಾಗುತ್ತದೆ. ಬೇಕಾದರೆ ಒಂದು ರೀಜನಲ್ ಆಫೀಸ್ ಬೆಳಗಾಂನಲ್ಲಿ ಮಾಡಲಿ, ಅದೇ ರೀತಿ ಮೀನುಗಾರಿಕೆ ನಿರ್ದೇಶನಾಲಯ ಮಂಗಳೂರಿನಲ್ಲಿ ಮಾಡುವ ಬದಲು ಅಲ್ಲೊಂದು ರೀಜನಲ್ ಆಫೀಸ್ ಮಾಡಿದರೆ ಸೂಕ್ತವೆಂದು ನಮ್ಮೆಲ್ಲರ ಅಭಿಪ್ರಾಯಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇವೆ.

ಶ್ರೀ ಎಂ.ಎಸ್.ಆತ್ಮಾನಂದ:- ಹೌದು ಅಧ್ಯಕ್ಷರೆ....

ಅಧ್ಯಕ್ಷರು:- ಸ್ವಾಮಿ, ಸ್ವಲ್ಪ ತಡೆಯಿರಿ, ಈಗಾಗಲೇ 20 ನಿಮಿಷಗಳು ಮುಗಿದು ಹೋಗಿದೆ. ನಾನು ಹೇಗೆ ಮ್ಯಾನೇಜ್ ಮಾಡಲಿ? ನೀವೇ ಹೇಳಿ, ನಿಮಗೆ ಬೇಕಾದರೆ ಒಂದು ಗಂಟೆ ಪ್ರಶ್ನೆ ಕೇಳುವಷ್ಟು ಶಕ್ತಿಯಿದೆ ಎಂಬುದು ನನಗೆ ಗೊತ್ತು ಸಮಯ ಎಲ್ಲಿದೆ ನೀವೇ ಹೇಳಿ.... ಒಪ್ಪಿಕೊಳ್ಳುತ್ತೇನೆ ದೇವ್ರು, ಹಾಗಾದರೆ ನನಗೆ ಬರೆದು ಕಳುಹಿಸಿ, ಅರ್ಧಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಆ ಮಂತ್ರಿಗೆ ನೀವು ಟೈಮ್‌ಬೌಂಡ್ ಹಾಕಲಿಲ್ಲ

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಸಚಿವರು 184 ಕೋಟಿ ರೂಪಾಯಿಗಳನ್ನು ರೈತರಿಗೆ ಪಾವತಿಸಬೇಕಾಗಿದೆ ಎಂದು ಇದರಲ್ಲಿ ಹೇಳಿದ್ದಾರೆ. ಇದು ಎಷ್ಟು ವರ್ಷಗಳಿಂದ ಇದೆ? ಯಾವಾಗ ಇದನ್ನು ತೀರಿಸುತ್ತೀರಿ? ಇದನ್ನು ಹೇಳಬೇಕಾಗುತ್ತದೆ, ಏಕೆಂದರೆ, ಇವತ್ತು ಬರ ಇರುವುದರಿಂದ ರೈತರು ಬಹಳ ಕಷ್ಟದಲ್ಲಿದ್ದು ಉರುಲು ಹಾಕಿಕೊಂಡು ಸಾಯುತ್ತಿರುವ ವಿಚಾರ ತಮಗೂ ಗೊತ್ತಿದೆ. ಹಾವೇರಿ ಜಿಲ್ಲೆಯಲ್ಲೂ ಕೂಡ ಹಿಂದೆಂದೂ ಕಾಣದಂಥ ಬರ ಬಿದ್ದು ಬಹಳ ಕಷ್ಟದಲ್ಲಿದೆ. ಹಾವೇರಿ ಸಕ್ಕರೆ ಕಾರ್ಖಾನೆಯ ರೈತರ ಬಾಕಿ ತೀರಿಸಿದಿರೋ ಹೇಗೆ? ತೀರಿಸದಿದ್ದರೆ ಎಂದು ತೀರಿಸುತ್ತೀರಿ? ಈ ಎರಡು ಪ್ರಶ್ನೆಗಳಿಗೆ ತಾವು ಉತ್ತರ ಹೇಳಬೇಕು. ಅವರು ಬಹಳ ದೀರ್ಘವಾಗಿ ಹೇಳುವುದರಿಂದ ಟೈಮ್ ಜಾಸ್ತಿ ಹೋಗುತ್ತದೆ, ನಾನು ಇಷ್ಟು ಹೊತ್ತಿನವರೆಗೆ ನೋಡಿದ ಹಾಗೆ ಏನು ಹೇಳಬೇಕು ಅದಕ್ಕೆ ಅವರು ನೇರವಾಗಿ

ಹೇಳುವುದಿಲ್ಲ, ನೇರವಾದ ಪ್ರಶ್ನೆಗಳಿಗೆ ನೇರವಾಗಿ ಉತ್ತರ ಹೇಳಿದರೆ ಅಷ್ಟೊಂದು ಟೈಮ್ ಹೋಗುವುದಿಲ್ಲ.

ಶ್ರೀ ಕೆ.ಬಿ.ಕೋಳಿವಾಡ:- ಮಾನ್ಯ ಅಧ್ಯಕ್ಷರೆ, ಇದೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ನನ್ನದೊಂದು ಸಣ್ಣ ಪ್ರಶ್ನೆ ಕೇಳುತ್ತೇನೆ, ಎರಡಕ್ಕೂ ನಂತರ ತಾವು ಉತ್ತರ ಹೇಳಬೇಕು. ಹಾವೇರಿ ಷುಗರ್ ಫ್ಯಾಕ್ಟರಿಯ ಬಗ್ಗೆ, ನಮ್ಮಲ್ಲಿರತಕ್ಕಂಥ ಕೆಸಿಸಿ ಬ್ಯಾಂಕ್‌ಗಳು ಇವು ಡಿಫಂಕ್ಟ್ ಆಗಿರುವುದರಿಂದ, ಸರ್ಕಾರ 4 ಕೋಟಿ ರೂಪಾಯಿಗಳನ್ನು ಕೊಟ್ಟು 18 ಕೋಟಿ ರೂಪಾಯಿಗಳ ಗ್ಯಾರಂಟಿ ಕೊಟ್ಟಿದೆ, ಆದರೆ ಇದನ್ನು ಅಪರೇಷನ್ ಮಾಡತಕ್ಕಂಥ ದೊಡ್ಡ ಸಮಸ್ಯೆಯನ್ನು ನಾವಿಂದು ಎದುರಿಸುತ್ತಿದ್ದೇವೆ. ಅದಕ್ಕೆ ಧಾರವಾಡ ಬ್ಯಾಂಕಿನ ಬದಲಾಗಿ ಬೇರೆ ಬಿಡಿಸಿಸಿ ಬ್ಯಾಂಕ್ ಅನ್ನು ಲೀಡ್ ಬ್ಯಾಂಕ್ ಎಂದು ಅಲ್ಲಿ ಮಾಡಿ, ತಾವು ತಕ್ಷಣ ಆದೇಶ ಹೊರಡಿಸಿ ಅಲ್ಲಿ ವ್ಯವಹಾರ ನಡೆಯಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೇಳಲಿಚ್ಚಿಸುತ್ತೇನೆ.

ಶ್ರೀ ಎಂ.ಎಸ್.ಆತ್ಮಾನಂದ:- ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗಡೆಯವರು ಹೇಳಿದ ಹಾಗೆ, ಬೆಳಗಾಂನಲ್ಲಿ ರೀಜನಲ್ ಆಫೀಸ್ ಮಾಡಿ, ಇಲ್ಲಿಯೇ ಸಕ್ಕರೆ ನಿರ್ದೇಶನಾಲಯ ಇರಬೇಕೆಂದು ಕೋರುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ:- ಈ ರಾಜ್ಯದ ಮಾರಾಟ ಮಹಾ ಮಂಡಳದ ಅಧ್ಯಕ್ಷನಾಗಿ ಈ ರಾಜ್ಯಕ್ಕೆ ಸಹಾಯ ಮಾಡಿರುವುದರಿಂದ ನಾನು ಕೂಡ ಕೆಲವೊಂದು ಅಂಶಗಳನ್ನು ಕೇಳಬಯಸುತ್ತೇನೆ. ನಾವು ಕಳೆದ ವರ್ಷ ನಮ್ಮ ರಾಜ್ಯದ ಮಾರಾಟ ಮಹಾ ಮಂಡಳದಿಂದ ಆರು ಸಾವಿರ ಟನ್ ಸಕ್ಕರೆಯನ್ನು ರಫ್ತು ಮಾಡಿದ್ದೆವು. ಇದರಲ್ಲಿ ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮಗೆ ಲಾಭ ಕಡಿಮೆ ಇದೆ. ನಮ್ಮಲ್ಲಿ ಇವತ್ತು 10.62 ಲಕ್ಷ ಮೆ.ಟನ್. ದಾಸ್ತಾನು ಇದೆ. ಇಷ್ಟೊಂದು ಬಂಡವಾಳ ಹಾಕಿರುವ ಕಾರ್ಖಾನೆಗಳ ಗತಿ ಏನು? ತೆಗೆದುಕೊಂಡಿರುವ ಕಬ್ಬಿಗೆ ದುಡ್ಡು ಕೊಡದಿದ್ದರೆ ಹೇಗೆ? ನಮಗೆ ಲಾಭ ಬೇಡ ಬ್ರೇಕ್ ಈವನ್ ಬಂದರೆ ಸಾಕು, 10 ಸಾವಿರ ಟನ್ ಸಕ್ಕರೆಯನ್ನು ರಫ್ತು ಮಾಡುವುದಕ್ಕೆ ಇವತ್ತು ನಮಗೆ ಆರ್ಡರ್ ಇದೆ, ಇವತ್ತು ನನಗೆ 22 ಸಾವಿರ ಟನ್ ಸಕ್ಕರೆಯ ಆರ್ಡರ್ ಬಂದಿದೆ. ನೀವು ರಿಬೇಟ್ ಕೊಟ್ಟರೆ ಸರ್ಕಾರದಿಂದ ಸಹಾಯ ಮಾಡಿದರೆ, ನಮಗೆ ಲಾಭವಾಗದಿದ್ದರೂ ಕನಿಷ್ಟ ನಮ್ಮ ಸಕ್ಕರೆಯನ್ನು ಬೇರೆ ದೇಶಕ್ಕೆ ರಫ್ತು ಮಾಡುವ ಅವಕಾಶ ಸಿಕ್ಕುತ್ತದೆ. ಸರ್ಕಾರ ಈ ಬಗ್ಗೆ ನಮ್ಮ ಅಧಿಕಾರಿಗಳು ಹಾಗೂ ನಿಮ್ಮ ಅಧಿಕಾರಿಗಳು ಕುಳಿತು ಚರ್ಚಿಸಲಿ. ಇದನ್ನು ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ತಮ್ಮಲ್ಲಿ ದಾಸ್ತಾನು ಇರುವ ಸುಮಾರು 1380 ಕೋಟಿ ರೂಪಾಯಿಯ ಮೌಲ್ಯದ 10.62 ಲಕ್ಷ ಮೆ.ಟನ್ ಏನಿದೆ ಇದನ್ನೆಲ್ಲಾ ಕಳುಹಿಸುವುದಕ್ಕೆ ನಾವು ರೆಡಿ ಇದ್ದೇವೆ. ಇದಕ್ಕೆ ಸರ್ಕಾರದವರು ಸ್ವಲ್ಪ ಸಹಕಾರ ಮಾಡಿದರೆ ನಾವು

ಪೂರ್ತಿಯಾಗಿ ಎಕ್ಸ್‌ಪೋರ್ಟ್ ಮಾಡಿ ರೈತರಿಗೆ ದುಡ್ಡು ಬರುವ ಹಾಗೆ ಮಾಡುತ್ತೇವೆ.

ಶ್ರೀ ಎ.ಕೃಷ್ಣಪ್ಪ: ಹಲವಾರು ಪ್ರಶ್ನೆಗಳ ಸುರಿಮಳೆ ಇಲ್ಲಿ ಆಗುತ್ತಾ ಇದೆ. ನಿರ್ದಿಷ್ಟವಾಗಿ ಕಳುಹಿಸಿರುವ ಪ್ರಶ್ನೆಗಳಿಗೆ ತಯಾರಾಗಿ ಬಂದಿದ್ದೇನೆ, ನನ್ನ ಮಿತಿಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು:- ತಾವು ಒಂದು ಕೆಲಸ ಮಾಡಿ, ಆ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಪಟ್ಟ ಹಾಗೆ ಎಲ್ಲಾ ಶಾಸಕರನ್ನು ಕರೆದು ಒಂದು ಮೀಟಿಂಗ್ ಮಾಡಿ.

ಶ್ರೀ ಎ.ಕೃಷ್ಣಪ್ಪ:- ಹಾವೇರಿ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ಹಾಗೆ ಸರ್ಕಾರ ಈಗಾಗಲೇ ಬ್ಯಾಂಕ್ ಗ್ಯಾರಂಟಿ ನೀಡಿದೆ. ಅದನ್ನು ಇಂಪ್ಲಿಮೆಂಟ್ ಮಾಡುವಾಗ ಆರು ಕೋಟಿ ರೂಪಾಯಿಗಳನ್ನು ಬಿಟ್ಟು ಉಳಿದ ಹಣಕ್ಕೆ ತೊಂದರೆಯಿದೆ ಎಂದು ಮಾನ್ಯ ಪಾಟೀಲರು ಹೇಳಿದ್ದಾರೆ. ಆ ಸಾಫ್ಟ್-ಲೋನ್ ಅನ್ನು ಕೊಟ್ಟಿದ್ದೇವೆ, ಮುಂದೆ ಅದನ್ನು ಆಪರೇಟ್ ಮಾಡುವುದಕ್ಕೆ ಬೇರೆ ಮಾರ್ಗ ಹುಡುಕಬೇಕೆಂದು ಸಲಹೆ ಕೊಟ್ಟಿದ್ದಾರೆ. ಅಲ್ಲಿ ಬರ ಇದೆ. ಬಹಳ ಕಷ್ಟ ಇದೆ ಎಂದು ಹೇಳಿದ್ದಾರೆ. ಅವರು ಹೇಳಿರುವ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಎಲ್ಲಾ ಕಡತಗಳನ್ನು ತರಿಸಿ ಖುದ್ದಾಗಿ ನೋಡುತ್ತೇನೆ.

ಅಧ್ಯಕ್ಷರು:- ದಯಮಾಡಿ ನಿಮ್ಮ ಛೇಂಬರ್ಸ್‌ನಲ್ಲಿ ಸಂಬಂಧಪಟ್ಟ ಶಾಸಕರನ್ನು ಕರೆದು ಒಂದು ಮೀಟಿಂಗ್ ಮಾಡಿ.

ಶ್ರೀ ಎ.ಕೃಷ್ಣಪ್ಪ:- ಬೇಕಾಗಿಲ್ಲ, ಅವರು ಕೇಳಿರುವುದನ್ನೆಲ್ಲಾ ಆ ಕಾರ್ಖಾನೆಗೆ ಕೊಟ್ಟಿದ್ದೇವೆ. ಆಪರೇಟ್ ಮಾಡುವುದಕ್ಕೆ ಏನು ಮಾಡಬೇಕು ಅದನ್ನೂ ಮಾಡುತ್ತೇವೆ.

ಅಧ್ಯಕ್ಷರು:- ಇವತ್ತು ಏನೇನು ಚರ್ಚೆಯಾಗಿ ಏನೇನು ಸಮಸ್ಯೆ ಉದ್ಭವಿಸಿದೆಯೋ ಆ ಬಗ್ಗೆಯೂ ಕೂಡ ಇವತ್ತು ಮತ್ತೊಂದು ಮೀಟಿಂಗ್ ಮಾಡಿ ಎಲ್ಲರ ಜೊತೆಯಲ್ಲಿ ಮಾತನಾಡಿ.

ಶ್ರೀ ಎ.ಕೃಷ್ಣಪ್ಪ:- ಮಾನ್ಯ ಶ್ರೀನಿವಾಸಗೌಡರವರು ಒಂದು ಸಲಹೆ ಮಾಡಿದ್ದಾರೆ. ಬೇಕಾದಷ್ಟು ಬೇಡಿಕೆಯಿರುವುದರಿಂದ ನಾವು ಎಲ್ಲವನ್ನೂ ರಫ್ತು ಮಾಡುತ್ತೇವೆಂದು ಹೇಳಿದ್ದಾರೆ. ಹೀಗಾಗಿ ನಾವು ಪಕ್ಕದ ದೇಶಗಳಿಗೆ ಸಕ್ಕರೆಯನ್ನು ಕಳುಹಿಸಿ ಕೊಟ್ಟೆವು, ಈಗ ಅದು ಪಾಲಿಸಿ ಡಿಸಿಷನ್ ಇದೆ, ಈಗಾಗಲೇ ಷುಗರ್ ಕೇನ್ ಎಷ್ಟು ಎಕ್ಸ್‌ಪೋರ್ಟಿಗೆ ಉಪಯೋಗಿಸುತ್ತೇವೆ, ಅಷ್ಟಕ್ಕೆ ಟ್ಯಾಕ್ಸ್ ಎಕ್ಸಂಪ್‌ಷನ್ ಕೊಟ್ಟಿದ್ದೇವೆ. ಷುಗರ್ ಎಕ್ಸ್‌ಪೋರ್ಟ್ ಮಾಡುವಾಗ ಆ ಡಿಫರೆನ್ಸ್ ವಿಚಾರ ಭಾರತ ಸರ್ಕಾರದ ಜೊತೆ ಮಾತುಕತೆ ನಡೆಯುತ್ತಿದೆ.

ಅಧ್ಯಕ್ಷರು:- ತಾವು ಉತ್ತರ ಹೇಳಿ ಏಕೆಂದರೆ, ಸಮಯದ ಅಭಾವವಿರುವುದರಿಂದ ಎಲ್ಲಾ ಸದಸ್ಯರನ್ನು ತಮ್ಮ ಕೊಠಡಿಗೆ ಕರೆದು ಚರ್ಚಿಸಿರಿ ಎಂದು ಹೇಳಿದೆ.

ಶ್ರೀ ಎ.ಕೃಷ್ಣಪ್ಪ:- ಡೈರೆಕ್ಟೊರೇಟ್ ವಿಚಾರದಲ್ಲಿ ಈ ಸದನದಲ್ಲಿ ಸದಸ್ಯರು ತಮ್ಮ ಅಭಿಪ್ರಾಯ ಏನಿದೆ ಎಂದು ವ್ಯಕ್ತ ಮಾಡುತ್ತಿದ್ದಾರೆ, ಈ ಬಗ್ಗೆ ನಾನು ಒಟ್ಟಾರೆ ಒಂದು ಮೀಟಿಂಗ್ ಕರೆದು ನಂತರ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಮುಂದಿನ ಪ್ರಶ್ನೆ ಮಾನ್ಯ ಸಿಂಧ್ಯಾರವರು ಕೇಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಅದಕ್ಕಿಂತ ಮುಂಚೆ ನನ್ನದೊಂದು ಪ್ರಶ್ನೆ ಇದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮುಚ್ಚಿರುವ ಕೈಗಾರಿಕೆಗಳ ವಿವರ ಎಷ್ಟು?

ಶ್ರೀ ಆರ್.ವಿ.ದೇಶಪಾಂಡೆ:-ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ ಪ್ರಶ್ನೆ ಬಹಳ ಮಹತ್ವದ್ದು ಇದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಮೂರು ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳು ಇವೆ? ಬಿಐಎಫ್ಆರ್ ನಲ್ಲಿ ಎಷ್ಟು ಕೇಸ್ ಇವೆ? ಇದನ್ನು ಬೇಕಾದರೆ ಹೇಳಬಹುದು. ಎಷ್ಟು ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ? ಇವರ ಪುನರ್ವಸತಿ ಏನು ಮಾಡಿದ್ದೀರಿ? ಈ ಎಲ್ಲಾ ಮಾಹಿತಿಯನ್ನು ಲೇಬರ್ ಡಿಪಾರ್ಟ್ಮೆಂಟ್ನಿಂದ ತರಿಸಿಕೊಳ್ಳಬೇಕಾಗುತ್ತದೆ. ನಾನು ಈ ಪ್ರಶ್ನೆಗೆ ಸಮಯ ಕೇಳಬೇಕೆಂದರೆ ನನಗೆ ಕೂಡ ನೋವು ಆಗುತ್ತದೆ. ಇವತ್ತು ನನ್ನ ಹೆಸರಿನಲ್ಲಿ 12 ಅನ್ಸ್ಟಾರ್ಡ್ ಕ್ವೊಶ್ಚನ್ಸ್ ಇದೆ. ನಾನು ಇದರಲ್ಲಿ 10 ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ, ನಿಮ್ಮ ಪ್ರಶ್ನೆಗೆ ನಾನು ಟೈಮ್ ಕೇಳಿದ್ದೇನೆ. ಏಕೆಂದರೆ, ನಿಮ್ಮ ಪ್ರಶ್ನೆಗೆ ಉತ್ತರ ತರಬೇಕಾದರೆ ಸ್ವಲ್ಪ ಟೈಮ್ ಬೇಕು. ಏಕೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಕೇಳಿದ್ದಾರೆಂದರೆ, ಎಷ್ಟು ಜನ ಜಾಬ್ ಕಳೆದುಕೊಂಡಿದ್ದಾರೆಂದು ಕೇಳಿದ್ದಾರೆ. ಇದರ ಜೊತೆಗೆ ಅವರಿಗೆ ಪುನರ್ವಸತಿ ಕಲ್ಪಿಸಿಕೊಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕಾರ್ಮಿಕ ಇಲಾಖೆಯಿಂದ ಮಾಹಿತಿ ಪಡೆಯಬೇಕಾಗಿದೆ. ಆದ್ದರಿಂದ Nexttime, without fail, I will reply your question.

ಶ್ರೀ ಎಸ್.ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ದೇಶಪಾಂಡೆಯವರದು ಒಂದು ರೆಕಾರ್ಡ್ ಇದೆ. ಅದೇನೆಂದರೆ, ಕಳೆದ 8 ವರ್ಷಗಳಿಂದ ಈ ರಾಜ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆಯ ಸಚಿವಾರಗಿರತಕ್ಕಂಥದ್ದು ಒಂದು ರೆಕಾರ್ಡ್ ಆಗಿದೆ. ಆದ್ದರಿಂದ ಕೈಗಾರಿಕೆಯ ವಿಷಯಕ್ಕೆ ಸಂಬಂಧಪಟ್ಟಂತೆ ಎಲ್ಲಾ ವಿಷಯಗಳು ಅವರ ಬಾಯಿಯಲ್ಲಿಯೇ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವರು ಬಿ.ಐ.ಎಫ್.ಆರ್.ಗೆ ಎಷ್ಟೆಷ್ಟು ಕಳುಹಿಸಿದ್ದಾರೆ ಎನ್ನತಕ್ಕಂಥದ್ದು ನನಗೆ ಗೊತ್ತಿದೆ. ಎನ್ಜಿಎಫ್ ಮತ್ತು ಮೈಸೂರ್ ಲ್ಯಾಂಪ್ಸ್ ಕಾರ್ಖಾನೆಗಳ ಕತೆ ಎಲ್ಲರಿಗೂ ಸಹ ಗೊತ್ತಿದೆ. ಇಲ್ಲಿನ ನೌಕರರು ನರಳುತ್ತಿರುವುದು ಮತ್ತು ಅಳುತ್ತಿರುವ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡದೇ ಮುಂದಿನ ಸಲ ಮುಂದಿನ ಸಲ ಎಂದು ಹೇಳಿದರೆ ಏನು ಅರ್ಥ? ಅಷ್ಟರೊಳಗೆ ಇನ್ನಷ್ಟು ಕಾರ್ಖಾನೆಗಳು ಮುಚ್ಚಬೇಕೆ?

ಅಧ್ಯಕ್ಷರು:- ಸದರಿ ಪ್ರಶ್ನೆಗೆ ಸಂಬಧಪಟ್ಟಂತೆ ಎಲ್ಲಾ ಮಾಹಿತಿಗಳನ್ನು ಕಲೆಕ್ಟ್ ಮಾಡುವುದಕ್ಕೋಸ್ಕರ ಸಮಯವನ್ನು ಮಾನ್ಯ ಸಚಿವರು ಕೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಹೈಟೆಕ್ ಸರ್ಕಾರ, ಹೈಟೆಕ್ ಮಂತ್ರಿಗಳು ಮತ್ತು ಇ-ಗೌರ್ನೆನ್ಸ್ ಎಂದು ಹೇಳುತ್ತೀರಲ್ಲಾ ಈಗ ನಿಮ್ಮ ಇ-ಗೌರ್ನೆನ್ಸ್ ಎಲ್ಲಿಗೆ ಹೋಯಿತು? ಇವರಿಗೆ ಅಂಕಿ-ಅಂಶಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ನಾವು 15 ದಿವಸಗಳ ಮುಂಚಿತವಾಗಿಯೇ ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದು ಇಲ್ಲಿಯವರೆಗೆ ಇವರಿಗೆ ಮಾಹಿತಿ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೆ? ಹಾಗಾದರೆ, ಈ ಸದನವನ್ನು ಏಕೆ ನಡೆಸಬೇಕು? ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡುವುದು ಒಳ್ಳೆಯದು.

ಶ್ರೀ ಎಸ್.ಸುರೇಶ್ ಕುಮಾರ್:- ಹೀಗೆ ಮುಂದು ಹೋಗುತ್ತಾ ಇದ್ದರೆ, ಅಷ್ಟರೊಳಗೆ ಎನ್‌ಜಿಎಫ್ ಮತ್ತು ಮೈಸೂರು ಲ್ಯಾಂಪ್ಸ್ ಹಾಗೂ ಎಂಇಐ ಕಾರ್ಖಾನೆಗಳನ್ನು ಮುಚ್ಚಿ ಅನಂತರ ಇಲ್ಲಿಗೆ ಉತ್ತರ ಕೊಡುತ್ತಾರೆಂದು ಕಾಣುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- 31ನೇ ತಾರೀಖಿನೊಳಗೆ ಎನ್.ಜಿ.ಎಫ್. ಕಾರ್ಖಾನೆಯನ್ನು ಮುಚ್ಚಲಾಗುತ್ತದೆಂದು ಈಗಾಗಲೇ ಅಲ್ಲಿನ ನೌಕರರಿಗೆ ನೋಟೀಸ್ ಕೊಟ್ಟಿದ್ದಾರೆ. ಅದು ಏನೆಂದರೆ,

"If you do not opt for V.R.S. within the stipulated date, i.e., 31st, you may treat this as termination notice."

ಅಂದರೆ, ಎನ್‌ಜಿಎಫ್ ಮುಚ್ಚುವಂಥದ್ದರ ಬಗ್ಗೆ ಚರ್ಚೆ ಮಾಡಬಾರದೆಂದು ಈ ರೀತಿ ಮಾಡಿದ್ದಾರೆ ಎಂದು ಕಾಣುತ್ತದೆ. ಹಾಗೆಯೇ ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಮುಚ್ಚುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಇದರ ಬಗ್ಗೆಯೂ ಕೂಡ ಚರ್ಚೆ ಮಾಡಬಾರದೆಂದು ಈ ರೀತಿ ಮಾಡುತ್ತಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು:-ಮಾನ್ಯ ಸಚಿವರು ಸದರಿ ಪ್ರಶ್ನೆಗೆ ಸಂಬಂಧಪಟ್ಟಂತೆ ಹೆಚ್ಚಿನ ಸಮಯವನ್ನು ಕೇಳಿದ್ದಾರೆ. ಆದ್ದರಿಂದ, ಸಮಯವನ್ನು ಕೊಡತಕ್ಕಂಥದ್ದು ನಮ್ಮ ಕರ್ತವ್ಯವಾಗಿದೆ. ಈಗ ಸರಿಯಾದ ಉತ್ತರ ಕೊಟ್ಟಿಲ್ಲ. ಆದ್ದರಿಂದ ನಮಗೆ ಪರ್ಫೆಕ್ಟ್ ಉತ್ತರ ಬೇಕೆಂದು ತಾವು ಕೇಳುತ್ತಿದ್ದೀರಿ. ಆದ್ದರಿಂದ ಸಮಯವನ್ನು ಕೊಡಲೇಬೇಕಾಗುತ್ತದೆ. ಆದ್ದರಿಂದ ಈ

ಪ್ರಶ್ನೆಯನ್ನು ಮುಂದಿನ ಗುರುವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇದು 20 ದಿವಸಗಳ ಹಿಂದೆ ಕಳುಹಿಸಿರತಕ್ಕಂಥ ಪ್ರಶ್ನೆ. ಇ-ಗೌರ್ನೆನ್ಸ್ ಎಂದು ಹೇಳುತ್ತಾರೆ, ಅದು ಎಲ್ಲಿದೆ? ಹೈಟೆಕ್ ಸರ್ಕಾರ, ಹೈಟೆಕ್ ಮಂತ್ರಿಗಳು ವಿದೇಶಿ ಬಂಡವಾಳ ತರುತ್ತಿದ್ದಾರೆ. ಆದರೆ, ರಾಜ್ಯದಲ್ಲಿರತಕ್ಕಂಥ ಕೈಗಾರಿಕೆಗಳೇ ಮುಚ್ಚುವಂಥ ಸ್ಥಿತಿಗೆ ಬಂದಿದೆ. ಆದ್ದರಿಂದ ಇವುಗಳ ಬಗ್ಗೆಯೂ ಕೂಡ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ಅಶೋಕ ಹೋಟೆಲ್ ಲಾಭದಲ್ಲಿ ನಡೆಯುತ್ತಿದ್ದರೂ ಕೂಡ ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದೀರಿ, ಏಕೆ?

ಶ್ರೀ ಜಗದೀಶ್ ಶೆಟ್ಟರ್:- ಈ ವಿಷಯವನ್ನು ಪಾರ್ಲಿಮೆಂಟ್‌ಗೆ ಹೋಗಿ ಚರ್ಚೆ ಮಾಡಿ. ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ಆರ್.ವಿ.ದೇಶಪಾಂಡೆ:- ನಾವು ನಿಮ್ಮ ಮೇಲೆ, ನೀವು ನಮ್ಮ ಮೇಲೆ ಆಪಾದನೆ ಮಾಡುವುದನ್ನು ಎಲ್ಲಿ ಮಾಡಬೇಕೋ ಅಲ್ಲಿ ಮಾಡೋಣ. ಆದರೆ, ಅನಾವಶ್ಯಕವಾಗಿ ಇಲ್ಲಿ ಮಾತನಾಡುವುದು ಬೇಡ. ಎನ್:ಜಿ.ಎಫ್. ಮತ್ತು ಮೈಸೂರು ಲ್ಯಾಂಪ್ಸ್ ಕಾರ್ಖಾನೆಗಳ ಬಗ್ಗೆ ಈ ಕೂಡಲೇ ಉತ್ತರ ಹೇಳುವುದಕ್ಕೆ ತಯಾರಿದ್ದೇನೆ. ಹಾಗೆಯೇ ಮೂರು ವರ್ಷದಿಂದ ನಮ್ಮ ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಿವೆ ಎಂಬುದರ ಬಗ್ಗೆ ಈಗಲೇ ಉತ್ತರ ಕೊಡುತ್ತೇನೆ. ಹಾಗೆಯೇ ಬಿಐಎಫ್ಆರ್-ನಲ್ಲಿ ಎಷ್ಟಿದೆ ಎಂಬುದರ ಬಗ್ಗೆ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. You ask about any industry, I am prepared to give reply. ಆದರೆ, ಎಷ್ಟು ಕಾರ್ಮಿಕರನ್ನು ವಜಾ ಮಾಡಿದ್ದಾರೆ ಎನ್ನತಕ್ಕಂಥಾದ್ದು ಮತ್ತು ಇವರಿಗೆ ಪುನರ್ವಸತಿ ಕಲ್ಪಿಸಿಕೊಡುವುದಕ್ಕೆ ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕಾರ್ಮಿಕ ಇಲಾಖೆಯ ಸಹಾಯ ತೆಗೆದುಕೊಳ್ಳಬೇಕಾಗಿರುವುದು, ಅದಕ್ಕಾಗಿ ಸಮಯ ಕೇಳುತ್ತಿದ್ದೇನೆ. ಅವರ ಸಹಾಯ ಇಲ್ಲದೇ ನಾನು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. I will have to take the help of the Labour Department. ಆದರೆ, ಜನರಲ್ ಪ್ರಶ್ನೆ ಕೇಳಿದಾಗ ನಾವು ಜವಾಬ್ದಾರಿಯುತವಾದ ಉತ್ತರ ಕೊಡಬೇಕಾಗುತ್ತದೆ. I have to satisfy you atleast. If not you, atleast the House and myself have to get satisfied that I have given a proper reply. ಎನ್‌ಜಿಎಫ್ ಮುಚ್ಚುವುದಕ್ಕೆ ಹೊರಟಿದ್ದೀರಿ ಎಂದು ಅವರು ಸುಮ್ಮನೆ ಹೇಳತಕ್ಕಂಥಾದ್ದು ಸರಿಯಲ್ಲ. ನಾವೇನು ಕ್ಲೋಜ್ ಮಾಡುವುದಕ್ಕೆ ಹೊರಟಿಲ್ಲ. Government has to take some hard decision. ಇದಕ್ಕೆ ಸಂಬಂಧಪಟ್ಟಂತೆ ಭಾರತ ಸರ್ಕಾರದವರು ಏನು ಮಾಡುತ್ತಿದ್ದಾರೆ? What the Finance Minister is saying? What is that the Prime Minister is saying?

ಶ್ರೀ ಆರಗ ಜ್ಞಾನೇಂದ್ರ:- ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಇವರು ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ಇವರು ಕೇಂದ್ರ ಸರ್ಕಾರದ ಮಂತ್ರಿಗಳ ಮೇಲೆ ಆಪಾದನೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಈ ಪ್ರಶ್ನೆಯನ್ನು ಮುಂದಿನ ಗುರುವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:- ನಿಮ್ಮ ದೆಹಲಿ ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ಹೇಳಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್:- ಇದು ಶೂನ್ಯವೇಳೆಯ ಪ್ರಶ್ನೆಯಲ್ಲ. ಇದನ್ನು ಮಾನ್ಯ ದೇಶಪಾಂಡೆಯವರು ಅರ್ಥ ಮಾಡಿಕೊಳ್ಳಬೇಕು. ನಾವು 20 ದಿವಸಗಳ ಮುಂಚಿತವಾಗಿಯೇ ಪ್ರಶ್ನೆಯನ್ನು ಕಳುಹಿಸಿ ಕೊಡಲಾಗಿದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂಥ ಉತ್ತರವನ್ನು ನೀವೇ ಏಕೆ ತರಿಸಿಕೊಳ್ಳಲಿಲ್ಲ?

ಶ್ರೀ ಜಗದೀಶ್ ಶೆಟ್ಟರ್:- ಮಾಹಿತಿ ತೆಗೆದುಕೊಳ್ಳಲು 15 ದಿವಸ ಏಕೆ ಬೇಕು?

(ಗೊಂದಲ)

ಅಧ್ಯಕ್ಷರು:- ಐದಾರು ಜನ ಒಟ್ಟಿಗೆ ಮಾತನಾಡುತ್ತಿದ್ದಾರೆ. ಆದ್ದರಿಂದ ರೆಕಾರ್ಡ್ ಮಾಡಿಕೊಳ್ಳಬೇಡಿ.

xx

(ಗೊಂದಲ)

ಅಧ್ಯಕ್ಷರು:- ಮುಂದಿನವಾರ ಪರ್ಫೆಕ್ಟ್ ಆದಂಥ ಉತ್ತರವನ್ನು ಕೊಡುತ್ತೇನೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದ್ದರಿಂದ, ಮತ್ತೆ ಏಕೆ ಚರ್ಚೆ ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್:- ಇಷ್ಟು ದಿವಸದವರೆಗೆ ಉತ್ತರ ತೆಗೆದುಕೊಳ್ಳುವುದಕ್ಕೆ ಏಕೆ ಆಗಲಿಲ್ಲ?

---

xx – ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಾಗಿಲ್ಲ.

ಅಧ್ಯಕ್ಷರು:- ಹಿಂದಿನ ಮೂರು ವರ್ಷಗಳ ಮಾಹಿತಿಯನ್ನು ಕಲೆಕ್ಟ್ ಮಾಡುವುದರಿಂದ ಸ್ವಲ್ಪ ತಡವಾಗಿದೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ರೆಕಾರ್ಡ್ ಮಾಡಿಕೊಳ್ಳಬೇಡಿ.

ರಾಜ್ಯದ ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 39(587)

ಸದಸ್ಯರ ಹೆಸರು: ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ರಾಜ್ಯದ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಕೊರತೆಗೆ ಕಾರಣಗಳೇನು?

ಇ) ಈ ಕೊರತೆ ನೀಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ) ಇದುವರೆಗೆ ಔಷಧಿಗಳ ಸರಬರಾಜಿಗೆ ಖರ್ಚಾಗಿರುವ ಹಣವೆಷ್ಟು? (2001-2002ರ ಸಾಲಿನ ಜಿಲ್ಲಾವಾರು ವಿವರಗಳನ್ನು ಕೊಡುವುದು)

ಉತ್ತರ

ಅ) ಕೆಲವು ಕೊರತೆಗಳಿರುವುದು ಗಮನಕ್ಕೆ ಬಂದಿದೆ.

ಆ ಮತ್ತು ಇ) ಸರ್ಕಾರವು ಈ ಸಾಲಿನಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಈಗಾಗಲೇ ರೂ.2,51,51,870-00ಗಳ ಮೊತ್ತದ ಔಷಧಿಗಳನ್ನು ಖರೀದಿಸಿದೆ. ಮುಂದುವರಿದು ರೂ.80.00 ಲಕ್ಷಗಳ ಮೊತ್ತದ ಔಷಧಿಗಳನ್ನು ಸಾರ್ವಜನಿಕ ವಲಯದ ಉದ್ಯಮಗಳಿಂದ ಖರೀದಿಸುವುದು ಪರಿಶೀಲನೆಯಲ್ಲಿದೆ. ಪಶುಪಾಲನಾ ಇಲಾಖೆಯ ದರ ಗುತ್ತಿಗೆಯನ್ನು ಅಂತಿಮಗೊಳಿಸುವ ಕಾರ್ಯವು ನಡೆಯುತ್ತಿದೆ.